# ಕರ್ನಾಟಕ ಸರ್ಕಾರ

## ನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು, ಇವರು ಹೊರಡಿಸಿದ ನಡವಳಿಗಳು

ವಿಷಯ: ದಿನಾಂಕ 01/01/2015 ರಂದಿನಂತಿನ ವೃತ್ತಿ ಬೋಧಕರು/ಸಹಾಯಕ ವೃತ್ತಿ ಬೋಧಕರು ವೃಂದದ ನೌಕರರುಗಳ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಕುರಿತು.

ಉಲ್ಲೇಖ: 1. ಸರ್ಕಾರದ ಅಧಿಸೂಚನೆ ಸಂ; ಮಮಇ/434/ಎಸ್‌ಜೆಡಿ/2014, ದಿ.28/8/2014.
2. ನಿರ್ದೇಶನಾಲಯದ ತಾತ್ಕಾಲಿಕ ಆದೇಶ ಸಂ: ಮಮಅಇ/ಜ್ಯೇಷ್ಠತೆ/ವೃಬೋ/29/ 2014-2015, ದಿನಾಂಕ 24/04/2015.

----

ಪ್ರಸ್ತಾವನೆ: ಉಲ್ಲೇಖ(1)ರ ಆದೇಶದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೃತ್ತಿ ಬೋಧಕರು/ಸಹಾಯಕ ವೃತ್ತಿ ಬೋಧಕರು ವೃಂದದ ನೌಕರರುಗಳ 01/01/2015ರಂದಿನಂತಿನ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯನ್ನು ದಿನಾಂಕ 06/05/2015ರಂದು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿತ್ತು. ಸದರಿ ಜ್ಯೇಷ್ಠತಾ ಪಟ್ಟಿಯಲ್ಲಿ ನಿಗದಿಪಡಿಸಿದ ಸ್ಥಾನ ಹಾಗೂ ನಮೂದಿಸಲಾದ ಸೇವಾ ವಿವರಗಳ ಬಗ್ಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ನೌಕರರು ತಮ್ಮ ನಿಲುವನ್ನು ಸಮರ್ಥಿಸುವಂತಹ ದಾಖಲೆಗಳೊಂದಿಗೆ ಆಕ್ಷೇಪಣೆಗಳನ್ನು ಕಛೇರಿಯ ಮುಖ್ಯಸ್ಥರುಗಳ ಮೂಲಕ ವೆಬ್‌ಸೈಟ್‌ನಲ್ಲಿ ಆದೇಶವನ್ನು ಪ್ರಕಟಿಸಿದ 15 ದಿನದೊಳಗಾಗಿ ಸಲ್ಲಿಸುವಂತೆ ಸೂಚಿಸಲಾಗಿತ್ತು. ಇದರನ್ವಯ ಸದರಿ ವೃಂದದ ನೌಕರರು ಯಾವುದೇ ಆಕ್ಷೇಪಣೆಗಳನ್ನು ಸಲ್ಲಿಸಿರುವುದಿಲ್ಲ. ಈ ಹಿನ್ನಲೆಯಲ್ಲಿ ದಿನಾಂಕ 01/01/2015ರಂದಿನ ವೃತ್ತಿ ಬೋಧಕರು/ಸಹಾಯಕ ವೃತ್ತಿ ಬೋಧಕರು ವೃಂದದ ಸಾಮಾನ್ಯ ಜ್ಯೇಷ್ಠತೆ, ಪ್ರಾದೇಶಿಕ ಸ್ಥಳೀಯ ವೃಂದ(ಉಳಿಕೆ ವೃಂದ), ರಾಜ್ಯವ್ಯಾಪಿ ವೃಂದ ಮತ್ತು ಪ್ರಾದೇಶಿಕ ಸ್ಥಳೀಯ ವೃಂದದ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಕರ್ನಾಟಕ ನಾಗರಿಕ ನೌಕರರ(ಜ್ಯೇಷ್ಠತೆ) ನಿಯಮಾವಳಿಗಳು 1957ರ ನಿಯಮ 10ರನ್ವಯ ಪ್ರಕಟಿಸಲು ಇಲಾಖೆಯು ನಿರ್ಧರಿಸಿದ ಹಿನ್ನಲೆಯಲ್ಲಿ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸಂ: ಮಮಅಇ/ಜ್ಯೇಷ್ಠತೆ/ವೃಬೋ/22/2015-2016

ನಿರ್ದೇಶಕರ ಕಛೇರಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
1ನೇ ಮಹಡಿ, ಬಹು ಮಹಡಿಗಳ ಕಟ್ಟಡ,
ಡಾ.ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು -560001,
ದಿನಾಂಕ 22/07/2015

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳನ್ವಯ, ಕರ್ನಾಟಕ ಸರ್ಕಾರಿ ನೌಕರರ(ಜ್ಯೇಷ್ಠತೆ) ನಿಯಮಾವಳಿಗಳು 1957 ನಿಯಮ 10ರನ್ವಯ ವೃತ್ತಿ ಬೋಧಕರು/ಸಹಾಯಕ ವೃತ್ತಿ ಬೋಧಕರು ವೃಂದದ ನೌಕರರುಗಳ ದಿನಾಂಕ 01/01/2015ರಂದಿನಂತಿನ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಮಾಹಿತಿಯನ್ನು ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧ-1ರಲ್ಲಿ ಪ್ರಕಟಿಸಿ ಆದೇಶಿಸಿದೆ.

ಈ ಆದೇಶವನ್ನು ಸಂಬಂಧಪಟ್ಟ ನೌಕರರ ಮಾಹಿತಿಗಾಗಿ ಪ್ರಧಾನ ಕಛೇರಿಯ ವೆಬ್‌ಸೈಟ್ ಸಂಖ್ಯೆ: **http://dwcdkar.gov.in** ರಲ್ಲಿ ಪ್ರಕಟಿಸಲಾಗಿದೆ. ಸಂಬಂಧಪಟ್ಟ ಕಛೇರಿಯ ಮುಖ್ಯಸ್ಥರು ಈ ಅಂತಿಮ ಜ್ಯೇಷ್ಠತಾ ಪಟ್ಟಿಯ ಪ್ರತಿಯನ್ನು ತೆಗೆದು ಸಂಬಂಧಪಟ್ಟ ನೌಕರರ ಮಾಹಿತಿಗಾಗಿ ತಪ್ಪದೇ ಒದಗಿಸತಕ್ಕದ್ದು.

ಸಹಿ/- ಬಿ.ಎಂ.ವಿಜಯ್ ಶಂಕರ್
ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬೆಂಗಳೂರು.

ಪ್ರತಿಯನ್ನು ಕೆಳಕಂಡವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ :

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.
2. ಪ್ರಧಾನ ಕಛೇರಿಯ ಎಲ್ಲಾ ಜಂಟಿ ನಿರ್ದೇಶಕರು.
3. ಎಲ್ಲಾ ಜಿಲ್ಲಾಧಿಕಾರಿಗಳಿಗೆ,
4. ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
5. ಸಂಬಂಧಪಟ್ಟ ಎಲ್ಲಾ ಸುಧಾರಣಾ ಸಂಸ್ಥೆಗಳ ಅಧೀಕ್ಷರುಗಳಿಗೆ.
6. ಪ್ರಧಾನ ಕಛೇರಿಯ ಎಲ್ಲಾ ವಿಭಾಗದ ಅಧೀಕ್ಷಕರುಗಳಿಗೆ
   - ತಮ್ಮ ಶಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಈ ಜ್ಯೇಷ್ಠತಾಪಟ್ಟಿಯನ್ನು ಗಮನಕ್ಕೆ ತರುವುದು.
7. ಕಛೇರಿಯ ಸೂಚನಾ ಫಲಕಕ್ಕೆ/ ರಕ್ಷಣಾ ಕಡತ/ದಾಖಲೆ, ಪ್ರಧಾನ ಕಛೇರಿ, ಬೆಂಗಳೂರು.

22/7/15

ನಿರ್ದೇಶಕರ ಪರವಾಗಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬೆಂಗಳೂರು.

# ಅನುಬಂಧ-1

## ದಿನಾಂಕ 01/01/2015ರಲ್ಲಿದ್ದಂತೆ ವೃತ್ತಿ ಬೋಧಕರು/ಸಹಾಯಕ ವೃತ್ತಿ ಬೋಧಕರು/ಮುಖ್ಯ ವೃತ್ತಿ ಬೋಧಕರ (ವೇತನ ಶ್ರೇಣಿ:17650 – 32000)/ (ವೇತನ ಶ್ರೇಣಿ:12500 –24000) ವೃಂದದ ನೌಕರರುಗಳ ಅಂತಿಮ ಜ್ಯೇಷ್ಠತಾ ಪಟ್ಟಿ

**ಆದೇಶ ಸಂಖ್ಯೆ: ಮಮಅಇ/ಜ್ಯೇಷ್ಠತೆ/ವೃಭೋ/22/2015-2016, ದಿನಾಂಕ: 22/07/2015**

### ವೃತ್ತಿ ಬೋಧಕರು

| ಕ್ರ ಸಂ. | ನೌಕರರ ಹೆಸರು ಶ್ರೀ/ ಶ್ರೀಮತಿ | ವೃತ್ತಿ | ನೇ.ನೇ/ ಮುಂಬಡ್ತಿ | ಜನ್ಮ ದಿನಾಂಕ | ವೃಂದಕ್ಕೆ ನೇಮಕ ಗೊಂಡ ದಿನಾಂಕ | ನೈಜವಾಗಿ ಮುಂಬಡ್ತಿ ಹೊಂದಿದ | ನೇಮಕಾತಿಗೆ/ ಜೇಷ್ಠತೆಗೆ ನೈಜವಾದ ಅರ್ಹತಾ ದಿನಾಂಕ | ಷರಾ |
|---|---|---|---|---|---|---|---|---|
| 1 | ಜಹೀರ್ ಅಹ್ಮದ್ | ನೇಯ್ಗೆ | ನೇ.ನೇ | 07/01/1954 | 02/08/1976 | | 02/08/1976 | ನಿವೃತ್ತಿ |

### ಸಹಾಯಕ ವೃತ್ತಿ ಬೋಧಕರು

| | |
|---|---|
| | ಈ ವೃಂದದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ನೌಕರರು ಅಂಗವಿಕಲ ಕಲ್ಯಾಣ ಇಲಾಖೆಗೆ ವಿಲೀನಗೊಂಡಿರುವುದರಿಂದ ಜ್ಯೇಷ್ಠತಾ ಪಟ್ಟಿಯಲ್ಲಿ ಯಾರ ಹೆಸರನ್ನು ನಮೂದಿಸಿರುವುದಿಲ್ಲ |

### ಮುಖ್ಯ ವೃತ್ತಿ ಬೋಧಕರು

| ಕ್ರ ಸಂ. | ನೌಕರರ ಹೆಸರು ಶ್ರೀ/ ಶ್ರೀಮತಿ | ವೃತ್ತಿ | ನೇ.ನೇ/ ಮುಂಬಡ್ತಿ | ಜನ್ಮ ದಿನಾಂಕ | ವೃಂದಕ್ಕೆ ನೇಮಕ ಗೊಂಡ ದಿನಾಂಕ | ನೈಜವಾಗಿ ಮುಂಬಡ್ತಿ ಹೊಂದಿದ | ನೇಮಕಾತಿಗೆ/ ಜೇಷ್ಠತೆಗೆ ನೈಜವಾದ ಅರ್ಹತಾ ದಿನಾಂಕ | ಷರಾ |
|---|---|---|---|---|---|---|---|---|
| 1 | ಚಂದಾವರ್ಕರ್ ಕೆ.ಐ | ಹೊಲಿಗೆ | ನೇ.ನೇ | 01/06/1958 | 12/09/1980 | | 12/09/1980 | |

ಕರಡು ನಿರ್ದೇಶಕರಿಂದ
ಅನುಮೋದಿಸಲ್ಪಟ್ಟಿದೆ)

ನಿರ್ದೇಶಕರ ಪರವಾಗಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬೆಂಗಳೂರು.